ಅದರ ಎದುರು ಫಲ್ಗುಣ ಸೇನೆಯ ಸಾಲುಗಳಿದ್ದವು. ಮುಂಗಾರಿನಲ್ಲಿ ಸಿಡಿಲು ಮಿಂಚಿನ ಗರ್ಭಹೊತ್ತ ಎರಡು ತೀಕ್ಷ್ಣ ಮುಗಿಲುಗಳ ಗುಂಪು ಬಾನಿನ ಗಾಳಿಯ ಉರುಬಿಗೆ ಘರ್ಷಣೆಗೆ ಒಳಗಾಗಿ ಅಗ್ನಿಯ ಉಲ್ಕೆಯೊಡನೆ ಶಬ್ದಹೊಮ್ಮಿಸುವ ಮೊದಲು ದೃಷ್ಟಿಕಾಳಗಕ್ಕೆ ತೊಡಗುವುವು. ಹಾಗೆ ಆ ಎರಡು ಸೇನೆಗಳು ಯುದ್ಧಕ್ಕೆ ತಯಾರಾಗಿ ಆಯೋಜನೆಗೊಂಡು ನಿಂತಿದ್ದವು.

ತೇರಾನೆ, ಕುದುರೆ, ಕಾಲಾಳುಗಳು ಆ ಭೂಮಿಯನ್ನೆಲ್ಲ ತುಂಬಿ ಆವರಿಸಿತ್ತು. ಸೈನಿಕರು ಶಿರಸ್ತ್ರಾಣ, ಬಂಗಾರದ ಕುಶಲತೆಯಿಂದ ಮಾಡಲಾದ ಉಕ್ಕಿನ ಕವಚ ಧರಿಸಿದ್ದರು. ಅವರು ಚರ್ಮದಿಂದ ಮಾಡಿದ ಬತ್ತಳಿಕೆ, ಖಡ್ಗ, ಕೋದಂಡ, ಮುದ್ಗರ, ಗದೆ, ಬಿಂಡಿವಾಲ (ಕೈಯಿಂದ ಎಸೆಯುವ ಸಣ್ಣ ಭಲ್ಲೆಯಂತಹ ಆಯುಧ), ಚಕ್ರ, ಪರಿಘ (ಕಬ್ಬಿಣದ ಮೊನೆಗಳಿಂದ ಕೂಡಿದ ಗದೆ) ಮುಂತಾದ ನಾನಾ ಆಯುಧಗಳ ಕನಕ ಕಾಂತಿಯಿಂದ ಹೊಳೆಯುತ್ತಿದ್ದರು. ಅದು ದೇವತೆಗಳ ನೋಟಕ್ಕೆ ಹಬ್ಬವಾದಂತಿತ್ತು!

ಯುದ್ಧ ಪ್ರಾರಂಭ ಸಮಯದ ತೂರ್ಯವಾದ್ಯದ ಧ್ವನಿಗೆ, ವೇಗದುದ್ವೇಗದಿಂದ ರೋಷದಿಂದ ಘೋಷಣೆಗಳೊಡನೆ ಎರಡೂ ಸೇನೆ ಒಂದನ್ನೊಂದು ಎದುರಿಸಿತು. ಅದು ಭೂಕಂಪ ಕಾಲದಲ್ಲಿ ಎದುರು ಶಿಖರ ಸೀಮೆಯಿಂದ ಬಂಡೆಗಳು ಉರುಳಿ ಕಂದರ ತಳದಲ್ಲಿ ಡಿಕ್ಕಿಹೊಡೆದು ಹುಡಿ ಹುಡಿ ಹಾರಿ, ಕಿಡಿ ಕಿಡಿಯಾಗಿ ಸಿಡಿಯುವಂತಿತ್ತು.

ಗಜಸೇನೆಯ ಘೀಳು, ಕುದುರೆಗಳ ಹೇಷಾರವ, ಚಕ್ರದ ಚೀತ್ಕಾರ, ಬಿಲ್ಲಿನ ಹೆದೆ ಮಿಡಿದ ಟೇಂಕಾರ, ವೀರ ಪೌರುಷದ ರೋಷ ಆವೇಶದಬ್ಬರ, ಖಡ್ಗ ಖಡ್ಗದ ಖಣಿಲ್, ಕವಚ ಶಿರಸ್ತ್ರಾಣಗಳ ಠಣತ್ಕಾರ ಮುಂತಾದ ಅನೇಕ ವಿಧದ ನಾನಾ ಶಬ್ದಗಳು ಕಿವಿಗೆ ಅಪ್ಪಳಿಸಿ ಕಠೋರತೆಯನ್ನುಂಟು ಮಾಡಿದವು.

ಗಾಯ ಗಾಯಗಳಿಂದ ಚಿಮ್ಮಿದ ರಕ್ತ ಚಿಲುಮೆಗಳಿಂದ, ಸೈನಿಕರ ರಕ್ತದ ಹೊಳೆ ಹರಿದಿತ್ತು. ಅಲ್ಲಿ ರಣಕಾಳಿಯು ರುಂಡ ಮುಂಡಗಳ ಚೆಂಡಾಟವಾಡಲು – ಆ ಯುದ್ಧಭೂಮಿ ಯಮ ಭಯಂಕರವಾಯಿತು. ಆಗಸದಲ್ಲಿ ನೆರೆದು ನೋಡುತ್ತಿದ್ದ ದೇವತೆಗಳು ಬೆಚ್ಚಿಹೋದರು!

ವಿಜಯಲಕ್ಷ್ಮಿಯು ಕೈಯಲ್ಲಿ ವಿಜಯಮಾಲೆಯನ್ನು ಹಿಡಿದು ಒಮ್ಮೆ ಹಸ್ತಿನಾಪುರದ ಕಡೆಗೆ, ಮತ್ತೊಮ್ಮೆ ಮಣಿಪುರದ ಕಡೆಗೆ ಮನಸ್ಸನ್ನು ಓಲಾಡಿಸುತ್ತ, ಕೆಂಪಾದ ಒಲವಿನ ಉಯ್ಯಾಲೆಯಲ್ಲಿ ನಲಿದಾಡಿದಳು!

## ಕಳೆದ ಸಂಚಿಕೆಯಲ್ಲಿ

ಆರು ತಿಂಗಳ ನಂತರವೂ ಮನದನ್ನನನ್ನು ಕಾಣದೆ ಶೋಕಸಾಗರದಲ್ಲಿ ಮುಳುಗಿ, ಜೀವ ಕಳೆದುಕೊಳ್ಳಲು ಹೋದ ಚಿತ್ರಾಳಿಗೆ ಸಮುದ್ರ ಮೂರ್ತಿಯೇ ತಿಳಿಹೇಳಿದ. ಜೀವದ ಜಾತ್ರೆ ಮುಗಿಯುವುದರೊಳಗೆ ಅರ್ಜುನನ ದರ್ಶನವಾಗುವುದು, ಮಗನಿಗಾಗಿ ಬಾಳು ಎಂದು ಹರಸಿದ. ಬಭ್ರುವಾಹನನ ಜನನದೊಂದಿಗೆ ಚಿತ್ರಾಳ ಬದುಕಿನಲ್ಲಿ ನವವಸಂತ ಕಾಣಿಸಿಕೊಂಡಿತು. ಇತ್ತ ಯುದ್ಧಪರಂಪರೆಯೊಳಗೆ ಮುಳುಗಿದ ಅರ್ಜುನನಿಗೆ ತನ್ನ ಬದುಕಿನ ಬಂದುಹೋದ ಚಿತ್ರಾಳೆಂಬ ವಸಂತದ ನೆನಪೇ ಇಲ್ಲದಂತಾಯಿತು. ಯಜ್ಞಾಶ್ವವನ್ನು ಹಿಂಬಾಲಿಸುತ್ತಾ ಪಾರ್ಥನ ಸೇನೆ ಬಭ್ರುವಾಹನನ ಪುರವನ್ನೇ ತಲುಪಿತು.



## ಚಿತ್ರಾಂಗದೆ ಬೇಡುತಿರ್ದಳ್ ಬಿಡದೆ ಫಣಿಧರ ಪಿನಾಕಿಯಂ ತನ್ನಭೀಷ್ಟಂ ಸಫಲಮಕ್ಕೆಂದು

ಮಣಿಪುರದ ಧರಣಿಯಲ್ಲಿ ಹೀಗೆ ಆ ದಿನವೆಲ್ಲ ರಣದ ಕೋಲಾಹಲ, ಕೊಲೆಯ ಕೋಲಾಹಲ ಸತತವಾಗಿ ನಡೆಯಿತು. ಬಭ್ರುವಾಹನನ ತಾಯಿಯು ಇದೇನೊಂದನ್ನೂ ತಿಳಿಯದೆ, ಪರ್ಣಕುಟೀರದ ಮಧ್ಯೆ ಫಣಿಧರ ಪಿನಾಕಿಯನ್ನು ತನ್ನ ಅಭೀಷ್ಟವು ಸಫಲವಾಗಲೆಂದು ಸತತವಾಗಿ ಪ್ರಾರ್ಥಿಸುತ್ತಿದ್ದಳು. ಹೊತ್ತಿಳಿದು ಕತ್ತಲಾಯಿತು. ಮತ್ತೆ ಕತ್ತಲು ಅಳಿದು ಉದಯದ ಕಡೆ ಮುಂಬೆಳಕು ಮಳೆಯ ಮಬ್ಬಿನಲ್ಲಿ ಮೈದೋರಿತು.

ಚಿತ್ರೆಗೆ ಅವಳು ಹಾರೈಸಿದ ಆ ವಾರ್ತೆ ಬರದಿರಲು, ಖಿನ್ನತೆ ವಿಷಣ್ಣತೆಗಳು ಮುತ್ತಿಕೊಂಡು ಚಿತ್ರಹಿಂಸೆಯುಂಟಾಯಿತು. ಮತ್ತೆ ಆ ದಿನವೂ ನಿರೀಕ್ಷಣೆಯ ಹರಿತವಾದ ಅಲಗಿನ ಮೇಲೆ ಕಳೆಯಿತು. ಪತಿಸುತ ಹಿತದಿಂದ ಕುತೂಹಲಿತ ಮನಸ್ಸಿನ ಅವಳು ಆ ರಾತ್ರಿಯೂ ಶಿವನನ್ನು ಪೂಜಿಸಿದಳು. ತಮದ ನಿದ್ರೆಯನ್ನು ತೊರೆದು ಸಾತ್ವಿಕ ತುರೀಯ ನಿದ್ರಾ ಭಕ್ತಿರಸದಿಂದಿದ್ದಳು. ಆಗ ಧ್ಯಾನನಿದ್ರಾ ಸ್ವಪ್ನದರ್ಶನದಲ್ಲಿ ಒಂದು ದಿವ್ಯಾಕೃತಿಯ ಸುಂದರಮೂರ್ತಿ ಕಾಣಿಸಿತು!

‘ಸಾಧ್ವಿಯೆ, ತಪಸ್ವಿನಿಯೆ, ಪಿಂಗಲ ಜಟಾಧಾರಿ ಮಂಗಲ ವಿಭೂತಿಯಾದ ತ್ರಿಶೂಲಿಯ ಆಜ್ಞೆಯಂತೆ ನಾನು ನಿನ್ನ ಬಳಿಗೆ ಬಂದಿರುವೆನು. ಮಣಿಪುರದ ಕದನದಲ್ಲಿ ನಿನ್ನ ರಣಕಲಿ ಕುಮಾರನ ಕೈಲಿ, ಫಲ್ಗುಣನ ಸೇನೆಯಲ್ಲಿಯ ಅಪಾರಜನ ಮಡಿದರು. ಕ್ಷಣಕ್ಷಣಕ್ಕೆ ವೈರಿಯ ದಳವು ಬಲಗುಂದುತ್ತ ಅಳಿಯುತ್ತಿದೆ. ವೀರ ಪಾರ್ಥನ ವೀರವಾಣಿಯನ್ನು ಲೆಕ್ಕಿಸದೆ ಹಿಂಜರಿದು ಓಡುತ್ತಿದೆ.

‘ಕೆಲವರು ಸೇನಾನಿಗಳು ಗಾಯಗೊಂಡರು, ಕೆಲವರು ಪ್ರಾಣಬಿಟ್ಟರು. ಮತ್ತು ಉಳಿದವರ ಪ್ರಾಣ ಕೊರಳಿನಲ್ಲಿ ಮಿಡುಕಾಡುತ್ತಿದೆ. ಸೂರ್ಯನ ಮಗನ ಮಗ, ಹಂಸಧ್ವಜ, ನೀಲಕೇತು ಹಾಗೂ ಅನುಸಾಲ್ವ, ಪ್ರದ್ಯುಮ್ನ, ಯೌವನಾಶ್ವ ಮುಂತಾದ ರಣವೀರರು ಯುದ್ಧದಲ್ಲಿ ಹೋರಾಡಿ ಬಳಲಿದ್ದಾರೆ. ಕಟ್ಟಕಡೆಗೆ ಏನೆಂದು ಹೇಳಲಿ? ನಿನ್ನ ಮಗನಿಗೆ ಯುದ್ಧ ಕೈಗೂಡಿದೆ. ಲೋಕಕ್ಕೆ ಪ್ರಳಯಭೀತಿ ಹಬ್ಬಿದೆ. ರಜತಗಿರಿ ಕಂಪಿಸಿದೆ. ದೇವತೆಗಳು ಆ ಬಿರಿ ಉರಿಗೆ ಬೆದರಿ ಭಯಪಟ್ಟಿದ್ದಾರೆ! ಇಂದ್ರನು ಕೈಲಾಸಕ್ಕೆ ಓಡಿ ಹೋಗಿ, ತನ್ನ ಕುಮಾರನಾದ ಅರ್ಜುನನ ಕ್ಷೇಮಕ್ಕೆ ಪ್ರಾರ್ಥಿಸುತ್ತಿದ್ದಾನೆ.

‘ಸುಧಾಮೌಳಿಯು ನಿನ್ನ ಭಕ್ತಿಗೆ ಮೆಚ್ಚಿ, ನನ್ನನ್ನು ಇಲ್ಲಿಗೆ ಕಳುಹಿಸಿದ್ದಾನೆ. ಹೋಗು, ನಡೆ ಬೇಗ. ನಿಧಾನ ಮಾಡಿದರೆ ಪಾರ್ಥನ ಕಳೇಬರ ಧರೆಗೆ ಉರುಳಿ ಬೀಳುತ್ತದೆ. ಈ ರಾತ್ರಿಯು ನಿಶಾಯುದ್ಧದಲ್ಲಿ ತೊಡಗಿದೆ. ರಣದೇವತೆಗೆ ನಿನ್ನ ಹೃದಯದ ಬಲವನ್ನು ನೀಡಿ, ಕೆರಳಿರುವ ವಿಧಿಯನ್ನು ಸಮಾಧಾನ ಪಡಿಸು, ನೀನು ಪತಿಸುತ ಇಬ್ಬರಿಗೂ ಶುಭಂಕರಿಯಾಗು. ನಡೆ, ಹೋಗು, ಬೇಗ ಸಾಗು!’

## ನಿಮಿಷದಲಿ ಮಿಂಚಿ ಕಣ್ಮರೆಯಾಗಿ ಹೊಕ್ಕಳು ಕಳನ ನಡುವೆ

ಚಿತ್ರೆಯು ನಡುಗಿ ಬೆದರುತ್ತ, ಬೆವರಿ ಕನಸಿನಿಂದ ಎಚ್ಚೆತ್ತಳು. ಹಾ ಎನ್ನುತ್ತ, ಆ ತಾಯಿಯು, ಆ ಸತಿಯು ‘ಹಾ ಮಗನೆ! ಹಾ ಪತಿಯೆ’ ಎಂದು ಕೂಗುತ್ತ ಕಂಗೆಟ್ಟಳು. ಕುದಿವ ಎದೆಯಲ್ಲಿ ಓ ಎಂದು ರೋದಿಸುತ್ತ ಪರ್ಣಕುಟಿಯಿಂದ ಹೊರ ಹೊರಟಳು. ಕಗ್ಗತ್ತಲೆಯಲ್ಲಿ ಮುಗ್ಗುರಿಸಿ, ಮುನ್ನಡೆಯುತ್ತ ಅರಮನೆಗೆ ಬಂದಳು.

ಹಗಲೆನ್ನುವಂತೆ ದೀಪಸಾಲುಗಳು ಹೊಳೆಯುತ್ತಿದ್ದವು. ವಿಜಯ ವಾರ್ತೆಯ ಡಂಗೂರವನ್ನು ಹೊಡೆಯುತ್ತಿದ್ದರು. ಅದನ್ನು ಕೇಳಲು ಜನರು ಬೀದಿಗಳ ನಡುನಡುವೆ ಕಿಕ್ಕಿರಿದು ಸೇರಿದ್ದರು. ಅದನ್ನೆಲ್ಲ ನೋಡಿ, ಹವ್ವನೆ ಹಾರಿ ಎಚ್ಚರ ತಪ್ಪಿದಂತಾದಳು!

ನಿರ್ಜನತೆ ನಿಶ್ಚಿಂತೆ ನಿರ್ಮಲತೆಗಳ ತಪಸ್ವಿನಿ, ರಾಣಿ, ಅರಮನೆಗೆ ರಾತ್ರಿಯ ಹೊತ್ತು ಒಬ್ಬಳೇ ಬಂದುದನ್ನು ಕಂಡು ಸಖಿಯರು